# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 797
ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 17.09.2021

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ತುಮಕೂರು ಜಿಲ್ಲೆಯಆದಿಚುಂಚನಗಿರಿಯಿಂದ ಕಲ್ಲೂರ್ ಕ್ರಾಸ್ ಮಾರ್ಗವಾಗಿ ಬೆಂಗಳೂರಿಗೆ ಹೋಗುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಸುಮಾರು ವರ್ಷಗಳಿಂದ ಕಡಬಕ್ಕೆ ಬೆಳಗ್ಗೆ 5.20ಕ್ಕೆ ಬರುತ್ತಿದ್ದು, ಇತ್ತೀಚಿನ ದಿನಗಳಿಂದ ಬೆಳಗ್ಗೆ 5.00ಕ್ಕೆ ಬರುತ್ತಿರುವುದರಿಂದ ಅದನ್ನೆ ನಂಬಿರುವ ಸುತ್ತಮುತ್ತಲಿನ ಊರುಗಳ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಈ ವೇಳೆಯನ್ನು ಬದಲಾವಣೆ ಮಾಡಿ ಬೆಳಗ್ಗೆ 5.20ಕ್ಕೆ ಬರುವ ಹಾಗೆ ಮಾಡಲು ಇರುವ ಅಡಚಣೆ ಏನು; ಈ ಬದಲಾವಣೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕ.ರಾ.ರ.ಸಾ.ನಿಗಮದ ತುಮಕೂರು ವಿಭಾಗದ ತುರುವೇಕೆರೆ ಘಟಕದ ವತಿಯಿಂದ ಆದಿಚುಂಚನಗಿರಿ-ಕಲ್ಲೂರು ಕ್ರಾಸ್-ಬೆಂಗಳೂರು ಮಾರ್ಗದಲ್ಲಿ ಆದಿಚುಂಚನಗಿರಿಯಿಂದ ನಿರ್ಗಮಿಸಿ ಸಮಯ ಸುಮಾರು 05:20ಕ್ಕೆ ಕಡಬಕ್ಕೆ ಆಗಮಿಸಿ/ ನಿರ್ಗಮಿಸುವಂತೆ ಈ ಹಿಂದಿನಿಂದಲೂ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಸದರಿ ಸಾರಿಗೆ ಕಾರ್ಯಾಚರಣೆ ಸಮಯದಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ. |
| ಆ. | ಕಳೆದ ಒಂದು ತಿಂಗಳಿನಿಂದ ದಂಡಿನ ಶಿವಾರದಿಂದ ಕೆ.ಎಸ್.ಆರ್.ಟಿ.ಸಿ ಬಸ್ ಬೆಳಗ್ಗೆ 6.25ಕ್ಕೆ ಹೊರಟು ಬೆಂಗಳೂರಿಗೆ ಬರುತ್ತಿದ್ದ ಬಸ್ ಇತ್ತೀಚಿನ ದಿನಗಳಿಂದ ಬೆಳಗ್ಗೆ 5.30ಕ್ಕೆ ಆಗಮಿಸುತ್ತಿದ್ದು, ಇದರಿಂದ ಕಡಬ ಹಾಗೂ ಸುತ್ತುಮುತ್ತಲಿನ ಊರುಗಳ ಕೂಲಿ ಕಾಮಿಕರಿಗೆ/ ಸಾರ್ವಜನಿಕರಿಗೆ/ ಸರ್ಕಾರಿ ನೌಕರರುಗಳಿಗೆ ಬೆಂಗಳೂರಿಗೆ ಬರುವುದಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕ.ರಾ.ರ.ಸಾ.ನಿಗಮದ ತುಮಕೂರು ವಿಭಾಗದ ತುರುವೇಕೆರೆ ಘಟಕದ ವತಿಯಿಂದ ದಂಡಿನಶಿವರ-ತುಮಕೂರು-ಮೈಸೂರು ಮಾರ್ಗದಲ್ಲಿ ದಂಡಿನ ಶಿವರದಿಂದ ಸಮಯ 05:45ಕ್ಕೆ ನಿರ್ಗಮಿಸಿ ಕಡಬಕ್ಕೆ ಸಮಯ 6:20ಕ್ಕೆ ಆಗಮಿಸಿ/ ನಿರ್ಗಮಿಸುವಂತೆ ಕಾರ್ಯಾಚರಣೆ ಮಾಡುತ್ತಿದ್ದ ಸಾರಿಗೆ ಅನುಸೂಚಿಯನ್ನು ಸಾರ್ವಜನಿಕ ಪ್ರಯಾಣಿಕರ/ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಾರ್ಗವನ್ನು ಪರಿಷ್ಕರಿಸಿ, ದಂಡಿನಶಿವರ-ತುಮಕೂರು-ಬೆಂಗಳೂರು ಮಾರ್ಗದಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಕಡಬಕ್ಕೆ ಆಗಮನ/ನಿರ್ಗಮನ ಸಮಯದಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ. ಸದರಿ ಸಾರಿಗೆಯ ಅನುಕೂಲತೆಯನ್ನು ಈ ಭಾಗದ ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿರುತ್ತಾರೆ. |
| ಇ. | ಚಂದ್ರಶೇಖರಪುರದಿಂದ ಕಲ್ಲೂರು ಕ್ರಾಸ್ ಮಾರ್ಗವಾಗಿ ಕಡಬದಿಂದ ತುಮಕೂರಿಗೆ ಹೋಗುವ ಬಸ್ 6.50ಕ್ಕೆ ಬರಬೇಕಾಗಿದ್ದು, ಸಮಯಕ್ಕೆ ಸರಿಯಾಗಿ ಬಾರದೇ ಮತ್ತು ಹತ್ತಿರದ ದಾರಿಯಾದ ಕೆ.ಜಿ.ಟೆಂಪಲ್ | ಕೋವಿಡ್-19ರ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಘೋಷಿಸಿದ್ದ ಲಾಕ್‌ಡೌನ್ ತೆರವಿನ ನಂತರ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಕಡಿಮೆ ಇದ್ದುದರಿಂದ ಹಾಗೂ ಶಾಲಾ-ಕಾಲೇಜುಗಳು |

| | | |
|---|---|---|
| | ಮಾರ್ಗವಾಗಿ ಗುಬ್ಬಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪ್ರಾರಂಭವಾಗದೇ ಇದ್ದುದರಿಂದ ಕೋವಿಡ್-19ರ ಪೂರ್ವದಲ್ಲಿ ಇದ್ದಂತಹ ಎಲ್ಲಾ ಅನುಸೂಚಿ ಮಾರ್ಗಗಳ ಕಾರ್ಯಾಚರಣೆಯನ್ನು ಒಟ್ಟಿಗೆ ಪ್ರಾರಂಭಿಸದೇ, ಸಾರ್ವಜನಿಕ ಪ್ರಯಾಣಿಕರ ಅವಶ್ಯಕತೆ ಹಾಗೂ ಸಂಚಾರ ದಟ್ಟಣೆಗೆ ಅನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಚಂದ್ರಶೇಖರಪುರ-ಕಲ್ಲೂರು ಕ್ರಾಸ್-ಕಡಬ-ತುಮಕೂರು ಮಾರ್ಗದಲ್ಲಿ ಕಾರ್ಯಾಚರಣೆ ಮಾಡುತ್ತಿದ್ದ ಸಾರಿಗೆಯನ್ನು ತಾತ್ಕಾಲಿಕವಾಗಿ ಚಂದ್ರಶೇಖರಪುರ-ಕೆ.ಜಿ.ಟೆಂಪಲ್-ಗುಬ್ಬಿ ಮಾರ್ಗದಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿತ್ತು.<br><br>ನಿಗಮದ ಸಾರಿಗೆಗಳಲ್ಲಿ ಸಾರ್ವಜನಿಕ ಪ್ರಯಾಣಿಕರ ಸಂಚಾರವು ಸಾಮಾನ್ಯ ಸ್ಥಿತಿಗೆ ಪ್ರಸ್ತುತ ಮರಳುತ್ತಿರುವುದರಿಂದ ದಿನಾಂಕ:07.09.2021 ರಿಂದ ಜಾರಿಗೆ ಬರುವಂತೆ ಸದರಿ ಸಾರಿಗೆಯನ್ನು ಚಂದ್ರಶೇಖರಪುರ-ಕಲ್ಲೂರು ಕ್ರಾಸ್-ಕಡಬ-ತುಮಕೂರು ಮಾರ್ಗದಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ. |
| **ಈ.** | ಏಕಾಏಕಿ ಬದಲಾವಣೆ ಮಾಡಿರುವವರ ಮೇಲೆ ಕ್ರಮ ಕೈಗೊಳ್ಳಲು ಇರುವ ಅಡಚಣೆ ಏನು; | |
| ಉ. | ಈ ಹಿಂದಿನಂತೆಯೇ ನಿಗದಿತ ವೇಳಾಪಟ್ಟಿ ರೀತ್ಯಾ ಬಸ್‌ಗಳನ್ನು ಸಂಚರಿಸಲು ಸರ್ಕಾರವು ಅಗತ್ಯ ಕ್ರಮ ಕೈಗೊಳ್ಳುವುದೆ? (ವಿವರ ನೀಡುವುದು) | ಪ್ರಶ್ನೆ "ಅ" ರಿಂದ "ಇ" ರಲ್ಲಿ ಉತ್ತರಿಸಲಾಗಿದೆ. |

ಸಂಖ್ಯೆ: ಟಿಡಿ 206 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು